ಜೆಎಸ್‌ಎಸ್ ಮಹಾವಿದ್ಯಾಪೀಠ
**ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**
(ಸ್ವಾಯತ್ತ)
**ಊಟಿ ರಸ್ತೆ, ಮೈಸೂರು – 570 025**
ಪ್ರಚ್ಛನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)
Ph: 0821-2548236 & 2548380. FAX: 0821-2548238 E-mail: jssautonomous@gmail.com Website: JSSCACS.edu.in

ದಿನಾಂಕ: 13.01.2017

## ಪ್ರಕಟಣೆ ಕೃಪೆಗಾಗಿ

ಮೈಸೂರು ನಗರದ ಬಿ ಎನ್ ರಸ್ತೆಯಲ್ಲಿರುವ ಜೆಎಸ್‌ಎಸ್ ಪದವಿ ಮತ್ತು ಪದವಿ ಪೂರ್ವ ಕಾಲೇಜಿನ ಸಂಸ್ಕೃತ ವಿಭಾಗದ ವತಿಯಿಂದ ನಡೆದ ಸಂಸ್ಕೃತೋತ್ಸವ ಸಮಾರಂಭದಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ನಿವೃತ್ತ ಅಪರ ನಿರ್ದೇಶಕರಾದ ಪ್ರೊ. ಟಿ. ಎನ್. ಪ್ರಭಾಕರ್‌ರವರು ಜ್ಯೋತಿಯನ್ನು ಬೆಳಗಿಸಿ ಭಾಷಣ ಮಾಡುತ್ತಾ "ಪಾಶ್ಚಾತ್ಯ ಸಂಸ್ಕೃತಿ ಮತ್ತು ನಾಗರಿಕತೆಯನ್ನು ಹೊರತುಪಡಿಸಿ ಭಾರತೀಯ ಸನಾತನ ಸಂಸ್ಕೃತಿಯಲ್ಲಿರುವಂತಹ ವೇದ, ಉಪನಿಷತ್, ರಾಮಾಯಣ, ಮಹಾಭಾರತಗಳಲ್ಲಿ ಇರುವಂತಹ ಜ್ಞಾನ ಅಪಾರವಾದುದು. ಭಾರತ ಎಂದರೆ ಸಂಸ್ಕೃತ ಎಂದು ಗೌರವಿಸುವ ಕಾಲವೊಂದಿತ್ತು. ಮೆಕಾಲೆ ಮುಂತಾದವರು ವಿದೇಶಿ ಶಿಕ್ಷಣವನ್ನು ಜಾರಿಮಾಡಿ ನಮ್ಮಲ್ಲಿರುವಂತಹ ಅಪಾರ ಜ್ಞಾನ ಸಂಪತ್ತನ್ನು ಕಡೆಗಣಿಸಿದರು. ಆದರೆ ಇಂದು ವಿದೇಶಿಯರು ವೇದೋಪನಿಷತ್ತಿನ ಜ್ಞಾನ ಹಾಗೂ ಯೋಗಾಭ್ಯಾಸದಲ್ಲಿ ತೊಡಗಿದ್ದಾರೆ. ಸರ್ವೇ ಭವಂತು ಸುಖಿನಾಃ ಸರ್ವೇ ಸಂತು ನಿರಾಮಯಾಃ ಸರ್ವೇ ಭದ್ರಾಣಿ ಪಶ್ಯಂತು, ಮಾ ಕಶ್ಚಿದ್ ದುಃಖಭಾಗ್ ಭವೇತ್. ಇದರ ಅರ್ಥ ಎಲ್ಲರೂ ಸುಖದಿಂದ ಇರಲಿ. ಎಲ್ಲರೂ ಆರೋಗ್ಯವಂತರಾಗಿ ಬಾಳಲಿ, ಎಲ್ಲರೂ ಒಳ್ಳೆಯದನ್ನೇ ನೋಡಲಿ, ಯಾರೊಬ್ಬರು ದುಃಖಕ್ಕೆ ಭಾಗಿಯಾಗಬಾರದು.

ಪ್ರಾಚೀನ ಕಾಲದಲ್ಲಿ ಅನೇಕ ವೇದೋಪನಿಷತ್ತಿನ ಆಧಾರಿತವಾದ ವಿಚಾರಧಾರೆಗಳನ್ನು ಮಕ್ಕಳಿಗೆ ತಿಳಿಸಿಕೊಡುವ ವ್ಯವಸ್ಥೆಯಿತ್ತು. ಸಮಾಜದ ಹಿತವೇ ನಮ್ಮ ಹಿತ ಹಾಗೂ ವಿಕಾಸ ಎನ್ನುವ "ವಸುದೈವ ಕುಟುಂಬಕಂ" ಎನ್ನುವ ಭಾವನೆ ಭಾರತೀಯರೆಲ್ಲರಲ್ಲಿಯೂ ಇತ್ತು. ದೇಶದ ಪ್ರತಿಯೊಬ್ಬರಿಗೂ ಸಂಸ್ಕೃತ ಭಾಷೆಯನ್ನು ಪರಿಚಯಿಸುವ ಕಾಲ ಬಂದಿದೆ. ಸಂಸ್ಕೃತ ಭಾಷೆಯಿಂದ ನಮ್ಮ ಉಜ್ವಲ ಭವಿಷ್ಯವನ್ನು ರೂಪಿಸಿಕೊಳ್ಳಲು ಸಾಧ್ಯ. ಸಂಸ್ಕೃತಾಧ್ಯಯನ ಮಾಡಿದವರಲ್ಲಿ ಶಾಂತಿ, ನೆಮ್ಮದಿ, ಸುವ್ಯವಸ್ಥಿತವಾದ ಜೀವನವನ್ನು ಕಾಣಬಹುದು. ಸಂಸ್ಕೃತ ಶಿಬಿರಗಳ ಮುಖಾಂತರ ಸಂಸ್ಕೃತ ಎಲ್ಲರ ಮನೆಮಾತಾಗಬೇಕು" ಎಂದು ಕರೆ ನೀಡಿದರು.

ವಿದ್ವಾನ್ ಡಾ. ವೆಂಕಟರಮಣ ಹೆಗಡೆಯವರು ಕೌಟಿಲ್ಯ ಅರ್ಥಶಾಸ್ತ್ರದಲ್ಲಿನ ವೇದ ವಿದ್ಯೆಗಳ ಸ್ಥಾಪನೆ, ಕೃಷಿ ಪಶುಪಾಲನೆ, ದಂಡನೀತಿ ಹಾಗೂ ಇಂದ್ರಿಯ ಜಯ ವಿಷಯವನ್ನು ಕುರಿತು ಮಾತನಾಡುತ್ತಾ "ಆ್ಯಡಂಸ್ಮಿತ್‌ಗಿಂತ ಮೊದಲೇ ಇದ್ದಂತಹ ಕೌಟಿಲ್ಯನ ವಿಚಾರವನ್ನು ಯಾರು ತಿಳಿದುಕೊಳ್ಳಲು ಪ್ರಯತ್ನಿಸಿರಲಿಲ್ಲ. ಕೌಟಿಲ್ಯನ ವಿಚಾರಗಳನ್ನು ಅರ್ಥಶಾಸ್ತ್ರ ಮತ್ತು ರಾಜ್ಯಶಾಸ್ತ್ರವನ್ನು ಅಧ್ಯಯನ ಮಾಡುವವರು ತಿಳಿದಿರಬೇಕು. ರಾಷ್ಟ್ರದಲ್ಲಿಯೇ ಮಹತ್ವದ ಸ್ಥಾನವನ್ನು ಹೊಂದಿರುವಂತಹ ಕೃಷಿ, ಪಶುಪಾಲನೆ ಮತ್ತು ವಾಣಿಜ್ಯ ವ್ಯಾಪಾರಗಳಿಗೆ ಕೌಟಿಲ್ಯನ ಅರ್ಥಶಾಸ್ತ್ರವು ಮಹತ್ವದ ಸ್ಥಾನವನ್ನು ಕೊಟ್ಟಿದೆ. ಆದಕಾರಣ ಅರ್ಥಶಾಸ್ತ್ರದ ಅಧ್ಯಯನ ಮಾಡಬೇಕು" ಎಂದು ತಿಳಿಸಿದರು.

ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯರವರು ಪ್ರಾಸ್ತಾವಿಕ ನುಡಿಗಳನ್ನಾಡಿ " ಸಂಸ್ಕೃತವು ಜಗತ್ತಿನ ಅನೇಕ ಭಾಷೆಗಳಿಗೆ ಜ್ಞಾನ ಸಂಪತ್ತನ್ನು ಒದಗಿಸಿದೆ. ಆದರೆ ಭಾರತೀಯರಾದ ನಾವುಗಳೇ ಸಂಸ್ಕೃತದ ಬಗ್ಗೆ ಅಶ್ರದ್ಧೆ ವಹಿಸಿದ ಕಾರಣದಿಂದ ವ್ಯವಹಾರಿಕವಾಗಿ ಉಳಿಯದೇ ಹೋಯಿತು. ಇಂದು ಸಂಸ್ಕೃತದತ್ತ ನಮ್ಮ ದೇಶ ಮಾತ್ರವಲ್ಲ ಪ್ರಪಂಚವೇ ಮುಖ ಮಾಡಿರುವುದು ಹೆಮ್ಮೆ ಪಡುವ ವಿಷಯ" ಎಂದರು.

ಕಾರ್ಯಕ್ರಮದಲ್ಲಿ ಪದವಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಂ. ಮಹದೇವಪ್ಪರವರು ಹಾಗೂ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ. ಎಸ್. ಸೋಮಶೇಖರ ಅವರು ಉಪಸ್ಥಿತರಿದ್ದರು. ಸಂಸ್ಕೃತ ವಿಭಾಗದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ವೇದಘೋಷ ಮತ್ತು ಪ್ರಾರ್ಥನೆಯನ್ನು ನಡೆಸಿಕೊಟ್ಟರು. ಪ್ರೊ. ಎಂ. ವಿಶ್ವನಾಥ್‌ರವರು ಎಲ್ಲರನ್ನು ಸ್ವಾಗತಿಸಿದರು, ಸಂಸ್ಕೃತ ವಿಭಾಗದ ಉಪನ್ಯಾಸಕಿಯಾದ ಶ್ರೀಮತಿ. ಎಂ.ಎಸ್. ಕೋಮಲರವರು ವಂದಿಸಿದರು. ಶ್ರೀ. ಶಿವಲಿಂಗದೇವರು ನಿರೂಪಿಸಿದರು.

ಪ್ರಾಂಶುಪಾಲರು
(ಪ್ರೊ ಎಂ ಮಹದೇವಪ್ಪ)
ಪ್ರಾಚಾರ್ಯರು
ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
ಊಟಿ ರಸ್ತೆ, ಮೈಸೂರು-25

ಗೆ
ಸಂಪಾದಕರು
--------------
--------------
ಮೈಸೂರು